೧೧) ಕುಂದಾಪುರ ತಾಲ್ಲೂಕು ಬೈಂದೂರು ಬಳಿ ಇರುವ 'ಕೂಸಿನ ಬೇಟ್' ಎಂಬಲ್ಲಿ ಸುಮಾರು ೭೦ ಹೆಕ್ಟೇರು ಕಾಡು ಕಡಿಯಲು ಪರವಾನಗಿಯನ್ನು ನೀಡಿರುವುದರ ಪರಿಣಾಮದ ಬಗ್ಗೆ

೧೨-೦೦ ಮಧ್ಯಾಹ್ನ

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದ ರೈತರು ತಮ್ಮ ವ್ಯವಸಾಯಕ್ಕಾಗಿ ಬೇಕಾದ ಸೊಪ್ಪು, ತರಗೆಲೆಗಳನ್ನು ಸ್ವಲ್ಪ ಒಳಭಾಗದಲ್ಲಿರುವ ಸರಕಾರಿ ಸ್ವಾಮ್ಯದ ಸುರಕ್ಷಿತ ಅರಣ್ಯಗಳಿಂದ ತರುತ್ತಿದ್ದಾರೆ. ಹಾಗೆಯೇ ಒಣಕಟ್ಟಿಗೆ ಸಹ, ಇದಕ್ಕೆ ಅರಣ್ಯ ಇಲಾಖೆಯ ಪರವಾನಿಗೆಯೂ ಇತ್ತು. ಇತ್ತೀಚಿನ ದಿನಗಳಲ್ಲಿ ಅರಣ್ಯ ಇಲಾಖೆಯವರು ಸುರಕ್ಷಿತ ಅರಣ್ಯ ಕೆಡಿಸಿ ಅಲ್ಲಿ ಗೇರು, ಅಕೇಶಿಯಾ, ಸರ್ವೆ (ಗಾಳಿ) ಇತ್ಯಾದಿ ಸೊಪ್ಪು ತರಗೆಲೆ ಸಿಗದ ಗಿಡಗಳನ್ನು ನೆಡುವುದು, ಪೂರ್ತಿ ಬೆಳೆದ ಮರಗಳನ್ನು ಮಾತ್ರ ತೆಗೆಯುವ ಬದಲು ಇಡೀ ಕಾಡನ್ನೇ ಕಡಿಸುವುದು ಕಂಡು ಬಂದಿದ್ದು ಇದರಿಂದ ರೈತರು ತುಂಬ ಆತಂಕಕ್ಕೊಳಗಾಗಿದ್ದಾರೆ.

ಕುಂದಾಪುರ ತಾಲ್ಲೂಕು ಬೈಂದೂರು ಬಳಿ ಇರುವ 'ಕೂಸಿನ ಬೇಟ್' ಎಂಬಲ್ಲಿ ಸುಮಾರು ೭೦ ಹೆಕ್ಟೇರ್ ಕಾಡು ಕಡಿಸಲು ಸರ್ವೆ ಹಾಗೂ ಮಾರ್ಕಿಂಗ್ ನಡೆದಿದೆ ಎಂಬುದಾಗಿ ತಿಳಿದು ಬಂದಿದೆ. ಸಮೂಹ ವೃಕ್ಷ ನಾಶಕ್ಕೆ ಬದಲು, ಬೆಳೆದ ಮರ ಮಾತ್ರ ತೆಗೆದು ಉಳಿದ ಮರಗಳಿಂದಾದರೂ ರೈತರಿಗೆ ಸೊಪ್ಪು, ತರಗೆಲೆ ಹಿಂದಿನಂತೆ ಸಿಗುವ ಸವಲತ್ತು ಒದಗಿಸಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಜಿ. ಎಸ್. ಬಾಗಲ್‌ಕೋಟ್ (ಅರಣ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಉಪ-ಅರಣ್ಯ ಸಂರಕ್ಷಣಾಧಿಕಾರಿ, ಕುಂದಾಪುರ ಅವರು ಸುರಕ್ಷಿತ ಅರಣ್ಯ, ಕುಂದಾಪುರ ಜಮೀನಿನ ಮಂತ್ರಿ ಕೆಲವೊಂದು ಪ್ರಸಂಗದಲ್ಲಿ ಕಾಯ್ದಿಟ್ಟ ಅರಣ್ಯದಿಂದಲೂ ಒಣ ಎಲೆ ಮತ್ತು ತಲೆಹೊರೆ ಸೌದೆಯನ್ನು ಒಯ್ಯಲು ಅನುಮತಿ ನೀಡಿರುವುದು ನಿಜ. ಬೈಂದೂರು ಸಮೀಪದ ಕುರ್ಸಿ ಬೆಟ್ಟದ ೭೦ ಹೆಕ್ಟೇರು ಕಾದಿಟ್ಟ ಅರಣ್ಯವನ್ನು ಕಡಿತಲೆ ಮಾಡಿ, ಉರುವಲು ನೆಡುತೋಪು ಬೆಳೆಸುವುದಕ್ಕಾಗಿ ಪ್ರಸ್ತಾವನೆ ಮಾಡಿ ಗಡಿ ಗುರುತಿಸಿತ್ತು, ಆದರೆ ಇತ್ತೀಚೆಗೆ ಉಪ ಅರಣ್ಯ ಸಂರಕ್ಷಣಾಧಿಕಾರಿ ಕುಂದಾಪುರ ಅವರು ಸದರೀ ಪ್ರದೇಶವನ್ನು ತಪಾಸು ಮಾಡಿ, ಈ ಭಾಗದಲ್ಲಿ ಕಡಿತಲೆ ಮಾಡುವುದು ಬೇಡವೆಂದು ಕೈಬಿಟ್ಟಿದ್ದಾರೆ. ಈಗ ಉತ್ತಮವಾದ ನೈಸರ್ಗಿಕ ಅರಣ್ಯಗಳನ್ನು ಕಡಿತಲೆ ಮಾಡಬಾರದೆಂಬ ನೀತಿಯ ಪ್ರಕಾರ ಸಂಪೂರ್ಣ ಕಡಿತಲೆಯನ್ನು ನಿಲ್ಲಿಸಲಾಗಿದೆ. ಆ ಪ್ರಕಾರ ಅರಣ್ಯದಿಂದ ಕೇವಲ ಸತ್ತ ಮತ್ತು ಬಿದ್ದ ಮರಗಳಿಂದ ಮಾತ್ರ ಸೌದೆ ಮತ್ತು ನಾಟಾಗಳನ್ನು ತೆಗೆಯಲಾಗುತ್ತಿದೆ. ಇಲಾಖೆಯು ಸ್ಥಳೀಯವಾಗಿ ಮಹತ್ವದ ಮತ್ತು ಉಪಯುಕ್ತ ಜಾತಿಯ ಮರಗಳಾದ ಮತ್ತಿ ನಂದಿ, ಹೊನ್ನೆ, ಹಲಸು, ಕರಿಮರ ಮತ್ತು ಗಾಳಿಮರಗಳನ್ನು ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ನೆಡುತೋಪುಗಳನ್ನು ಬೆಂಕಿಯಿಂದ ಮತ್ತು ದನಕರುಗಳಿಂದ ಸಂರಕ್ಷಿಸುವುದಕ್ಕಾಗಿ ಅವುಗಳ ಒಡ್ಡುಗಳ ಮೇಲೆ ೩-೪ ಸಾಲುಗಳಲ್ಲಿ ಅಕೇಶಿಯಾಗಳನ್ನು ಬೆಳೆಯಲಾಗುತ್ತಿದೆ.

ಸ್ಥಾನಿಕ ಜನರಿಗೆ ಸವಲತ್ತುಗಳನ್ನು ಕುಂಠಿತಗೊಳಿಸುವುದಿಲ್ಲ.

೧೨) ಕುಂದಾಪುರ ತಾಲ್ಲೂಕಿನ ಗಂಗೊಳ್ಳಿಯಲ್ಲಿ ೨೩-೩-೧೯೮೮ರ ಮಧ್ಯಾಹ್ನ ಸಂಭವಿಸಿದ ಬೆಂಕಿ ಅನಾಹುತದಲ್ಲಿ ನೊಂದವರಿಗೆ ಪರಿಹಾರ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ಕುಂದಾಪುರ ತಾಲ್ಲೂಕಿನ ಗಂಗೊಳ್ಳಿಯಲ್ಲಿ ತಾ. ೨೩ರ ಮಧ್ಯಾಹ್ನ ಸಂಭವಿಸಿದ ಬೆಂಕಿ ಅನಾಹುತದಲ್ಲಿ ೧೩ ಮೀನು ಶೇಖರಣ ಗುಡಿಸಲುಗಳು, ಒಂದು ಚಿಕ್ಕ ಹೋಟೆಲ್, ಒಂದು ಬೀಡಾ ಅಂಗಡಿ ೩ ಸಣ್ಣದ ಗೂಡುಗಳು, ೨ ಗಿಲ್‌ಸೆಟ್ ಯಾಂತ್ರೀಕೃತ ಮೀನುಗಾರಿಕಾ ದೋಣಿಗಳು ಒಂದು ಪರ್ಸೀನ್ ಬಲೆಯುತ ದೋಣಿ ಮತ್ತು ಸುಪಾರು ೨೫೦ ಕೆ.ಜಿ. ತೂಕದ ಹೊಸ ಬಲೆ, ಭಾರೀ ಪ್ರಮಾಣದ ಮೀನು ಸಂಗ್ರಹ, ಇತರ ಮೀನುಗಾರಿಕಾ ಉಪಕರಣಗಳು ನಾಶವಾಗಿ, ಲಕ್ಷಾಂತರ ರೂಪಾಯಿ ನಷ್ಟ ಸಂಭವಿಸಿರುವುದಾಗಿ ತಿಳಿದು ಬಂದಿದೆ. ತೀರ ಬಡವರೂ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ದುರ್ಬಲವರ್ಗದವರೂ, ಅಲ್ಪಸಂಖ್ಯಾತರೂ ಈ